**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಎಸ್.ಸಿ.87/2022</u>**

**ದಿನಾಂಕಃ 19.11.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 11 (ಚಾ.ಸಾ.3)**

| | | |
|---|---|---|
| **ಹೆಸರು** | ಃ | **ಉಮಾ** |
| **ಗಂಡನ ಹೆಸರು** | ಃ | **ಚಲುವಯ್ಯ** |
| **ವಯಸ್ಸು** | ಃ | **40 ವರ್ಷ** |
| **ಉದ್ಯೋಗ** | ಃ | **ಗೃಹಿಣಿ** |
| **ವಾಸ ಸ್ಥಳ** | ಃ | **ಕರಿಕಲ್ಲುದೊಡ್ಡಿ** |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ.1 ಮತ್ತು ಅವರ ಗಂಡ ಚಲುವರಾಜು ಗೊತ್ತು. ಚಲುವರಾಜು ಇವರ ತಾಯಿಯ ಹೆಸರು ಚಾಸಾ.2 ಕಮಲಮ್ಮ. ಚಲುವರಾಜು ಇವರಿಗೆ ಮದುವೆ ಆಗಿ 2 ಹೆಣ್ಣು ಮಕ್ಕಳು ಇದ್ದಾರೆ. ಆರೋಪಿ ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಸುಮಾರು 2-3 ವರ್ಷಗಳ ಹಿಂದೆ ಪೊಲೀಸರು ನಮ್ಮ ಮನೆಯ ಹತ್ತಿರ ಬಂದಿದ್ದರು. ಆರೋಪಿ ತನ್ನ ಹೆಂಡತಿಗೆ ತೊಂದರೆ ಕೊಟ್ಟ ಬಗ್ಗೆ ನಾನು ಪೊಲೀಸರಿಗೆ ಹೇಳಿಲ್ಲ. ಚಾಸಾ.1 ಇವರು ಪೊಲೀಸರಿಗೆ ದಾಖಲೆಗಳನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಮತ್ತು ಚಾಕನ್ನು ಪೊಲೀಸರಿಗೆ ಕೊಟ್ಟಿದ್ದು ನನಗೆ ಗೊತ್ತಿಲ್ಲ.

**2.** ನಿಪಿ.**1** ರಿಂದ **3** ನ್ನು ನಾನು ನೋಡಿಲ್ಲ. ನಿಪಿ.**5** ಮಹಜರ್ ನೋಡುತ್ತಿದ್ದೇನೆ, ಅದರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ.**5**(ಸಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

**3.** ದಿಃ**10.06.2022** ರಂದು ಚಾಸಾ.**1** ಇವರು ಆರೋಪಿಯ ವಿರುದ್ಧ ದೂರು ಕೊಟ್ಟಿದ್ದು, ಆ ವಿಚಾರ ಸಲುವಾಗಿ ಪೊಲೀಸರು ಸ್ಥಳಕ್ಕೆ ಬಂದಾಗ ಸ್ಥಳವನ್ನು ಚಾಸಾ.**1** ತೋರಿಸಿದ್ದು, ಚಾಸಾ.**1** ಇವರು ಆರೋಪಿ ನನಗೆ ಮಾನಸಿಕವಾಗಿ ದೈಹಿಕವಾಗಿ ವರದಕ್ಷಿಣೆ ತರುವುದಾಗಿ ಕಿರುಕುಳ ಕೊಡುತ್ತಿದ್ದು, **2017**ನೇ ಮೇ ತಿಂಗಳಿನಲ್ಲಿ ಚಾಕುವಿನಿಂದ ಕೂಯ್ದಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದಾಳೆ ಎಂದರೆ ಸುಳ್ಳು ಹಾಗೂ ಆರೋಪಿ ಚಾಸಾ.**2** ಇವರಿಗೆ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಹೊಡೆದಿದ್ದು, ಪೊಲೀಸರು ನನ್ನ ಸಮಕ್ಷಮ ನಿಪಿ.**5** ರಂತೆ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು.

**4.** ಆರೋಪಿ ಹಿಂಸೆ ನೀಡುತ್ತಿದ್ದು, ಆರೋಪಿ ಮತ್ತು ಚಾಸಾ.**1** ಇವರ ಮದುವೆ ಆಗಿದ್ದ ಬಗ್ಗೆ ಫೋಟೋ ನಿಪಿ.**1** ರಿಂದ **3** ಮತ್ತು ಲಗ್ನಪತ್ರಿಕೆ ಹಾಜರುಪಡಿಸಿರುತ್ತಾರೆ ಎಂದರೆ ಸುಳ್ಳು. ನನ್ನ ಸಮಕ್ಷಮ ನಿಪಿ.**5** ರಂತೆ ಮಹಜರ್ ಮಾಡಿದ್ದು, ಅದನ್ನು ಓದಿ ಹೇಳಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ಈ ಘಟನೆಗೆ ಸಂಬಂಧಪಟ್ಟಂತೆ ನಿಪಿ.**17** ರಂತೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸುಳ್ಳು. ನನ್ನ ಹೇಳಿಕೆಯಲ್ಲಿ ಆರೋಪಿ ಚಾಕುವಿನಿಂದ ಚಾಸಾ.**1** ರವರಿಗೆ ಹೊಡೆದಿದ್ದು, ಇದರ ಬಗ್ಗೆ ದೂರು ಕೊಡುವುದು ಬೇಡ ಎಂದು ಹೇಳಿದ್ದು, ನಂತರ ಚಾಸಾ.**1** ಇವರಿಗೆ ತೊಂದರೆ ಕೊಡುತ್ತಿದುದ್ದರಿಂದ ಅವಳು ವಿಷಸೇವನೆ ಮಾಡಿ ಆತ್ಮಹತ್ಯೆಗೆ ಪ್ರಯತ್ನ ಪಟ್ಟಿದ್ದಳು, ಇದಕ್ಕೆ ಸಂಬಂಧಪಟ್ಟಂತೆ ನಾವು ಬಿಡದಿಯ ಸುಭಾಷ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದರೆ ಸುಳ್ಳು.

**5.** ನಂತರ ಚಿಕಿತ್ಸೆ ಪಡೆದುಕೊಂಡು ಮನೆಗೆ ಬಂದಾಗ ಚಾಸಾ.**1** ರವರಿಗೆ ಆರೋಪಿ ಪುನಃ ಹಣ ಕೊಡುವಂತೆ ಪೀಡಿಸಿದ್ದು, ಕೈಯಿಂದ ಮುಖಕ್ಕೆ ಹೊಡೆದಿದ್ದು, ಇದರಿಂದ ಕಮಲಮ್ಮ ಇವಳ **3** ಹಲ್ಲು ಮುರಿದಿದ್ದು, ಇದಕ್ಕೆ ಸಂಬಂಧಪಟ್ಟಂತೆ ಬಿಡದಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ ಎಂದರೆ ಸುಳ್ಳು. ಇದಾದ **6** ತಿಂಗಳ ಹಿಂದೆ ಚಾಸಾ.**1** ಇವರ ಮನೆಯಲ್ಲಿ ಜನ ಸೇರಿ ಕೂಗಾಡಿದ್ದು, ಶಬ್ದ ಕೇಳಿ ನಾನು ಹೋಗಿ ನೋಡಲಾಗಿ ಆಗ ಆರೋಪಿ ಚಾಸಾ.**1** ರವರಿಗೆ ಹಣ ಕೊಡದೇ ಇದ್ದುದಕ್ಕೆ ಹಾಸಿಗೆ ಮತ್ತು ದಿಂಬಿಗೆ ಬೆಂಕಿ ಹಚ್ಚಿದ್ದು ನಾನು ನೀರು ಹಾಕಿ ಬೆಂಕಿ ಹಾರಿಸಿರುತ್ತೇನೆ ಎಂದರೆ ಸುಳ್ಳು.

**6.** ದಿಃ**20.04.2022** ರಂದು ಚಾಸಾ.**1** ರವರಿಗೆ ಬಟ್ಟೆ ಹೊಲೆಯಲು ನಾನು ಬಟ್ಟೆ ಕೊಡಲು ಬೆಳಿಗ್ಗೆ **09.00** ಗಂಟೆಗೆ ಹೋದಾಗ, ಆಗ ಆರೋಪಿ ಚಾಸಾ.**1** ಮತ್ತು **2** ರವರಿಗೆ ಹಣ ಕೊಡುವಂತೆ ಕೇಳಿದ್ದು, ಇಲ್ಲ ಎಂದು ಹೇಳಿದ್ದರಿಂದ ಚಾಸಾ.**2** ಇವರನ್ನು ಕೆಳಕ್ಕೆ ಕೆಡವಿ ಎದೆಯ ಮೇಲೆ ಕಾಲು ಇಟ್ಟು ಸಾಯಿಸುತ್ತೇನೆ ಎಂದು ಹಾಗೂ ಚಾಸಾ.**1** ರವರ ಕುತ್ತಿಗೆ ಇಸುಕಿ ಸಾಯಿಸುತ್ತೇನೆ ಎಂದು ಹೇಳಿರುತ್ತಾನೆ, ನಂತರ ನಾವು ಅಕ್ಕಪಕ್ಕದವರೆಲ್ಲಾ ಸೇರಿ ಜಗಳ ಬಿಡಿಸಿರುತ್ತೇವೆ, ನಂತರ ನಾವೆಲ್ಲರೂ ದೂರು ಕೊಡು ಎಂದು ಹೇಳಿ, ಪೊಲೀಸ ಠಾಣೆಗೆ ದೂರು ಕೊಟ್ಟಿರುತ್ತಾರೆ ಎಂದರೆ ಸುಳ್ಳು.

**7.** ಆರೋಪಿ ಮತ್ತು ಚಾಸಾ.**1** ರವರು ಒಂದೇ ಮನೆಯಲ್ಲಿ ವಾಸವಾಗಿದ್ದು ಚೆನ್ನಾಗಿ ಇದ್ದಾರೆ ಎಂದರೆ ನಿಜ. ಆ ಕಾರಣದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಏನು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ